## ಇಲ್ಲಿಯವರೆಗೆ

ಅಮೀರ್‌ಖಾನ್‌ರ 'ಸತ್ಯಮೇವ ಜಯತೇ' ಕಾರ್ಯಕ್ರಮದ ಮೂಲಕ ಭಾವೇಶ್‌ರ ಸಾಧನೆ ಮತ್ತಷ್ಟು ಜನಕ್ಕೆ ತಿಳಿಯುವಂತಾಯಿತು. ಅದೇ ಸಮಯಕ್ಕೆ ವಿಪ್ರೊದ ಅಜೀಂ ಪ್ರೇಂಜಿ ಅವರು ಭಾವೇಶ್ ಅವರನ್ನು ಹುಡುಕಿಕೊಂಡು ಬಂದು ಪರಿಚಯಿಸಿಕೊಂಡರು. ಖ್ಯಾತಿ ಹೆಚ್ಚಿದಷ್ಟೂ ಭಾವೇಶ್‌ರ ವಿನಯವಂತಿಕೆಯೂ ಹೆಚ್ಚತೊಡಗಿತು. ಆದರೆ, ಭಾವೇಶ್‌ರ ಕನಸು ದೊಡ್ಡದಿತ್ತು. ತಮ್ಮನ್ನು ನಂಬಿ ಬಂದ ಅಂಧಮಿತ್ರರಿಗೆ ಸುಭದ್ರ ಸೂರು–ಭವಿಷ್ಯ ಕಲ್ಪಿಸಿಕೊಡುವ ಮಹತ್ವಾಕಾಂಕ್ಷೆ ಅವರದಾಗಿತ್ತು. ಈ ಕನಸಿನ ದಾರಿಯಲ್ಲಿ ಹಿತೈಷಿಗಳ ಕೊಡುವ ಕೈಗಳ ನೆರವಿದ್ದರೂ, ಭಾವೇಶ್‌ರ ಸ್ವಾಭಿಮಾನ ಎಲ್ಲಕ್ಕೂ ಮಿಗಿಲಾಗಿತ್ತು.



ರಾಮಸುಖ್ ರೆಸಾರ್ಟ್‌ನಲ್ಲಿ ನಡೆಯಲಿತ್ತು. ಆ ಮೂರು ದಿನಗಳ ಕಾನ್ಫರೆನ್ಸ್‌ನಲ್ಲಿ ಹಲವು ಗಣ್ಯ ವ್ಯಕ್ತಿಗಳು ಭಾಷಣ ಮಾಡಲು ಬರಲಿದ್ದರು. ಮೂರನೇ ದಿನ ಸಂಜೆ ಸಿ.ಎ. ಅಸೋಸಿಯೇಷನ್ ಸಮಿತಿಯ ಅಭಯ್ ಬಾಗ್ಮಾರ್ ಅವರು ಭಾವೇಶ್ ಅವರನ್ನು ಒಂದು ಗಂಟೆಯ ಭಾಷಣ ಮಾಡಲು ಆಮಂತ್ರಿಸಿದರು. ಹೊಸದೇನನ್ನೋ ಮಾಡುವ ಉದ್ದೇಶದಿಂದ ಭಾವೇಶ್ ಅವರ ಭಾಷಣದ ಜೊತೆಗೆ, ಮೋಂಬತ್ತಿ ತಯಾರಿಸುವ ಕಾರ್ಯಾಗಾರವನ್ನೂ ಆಯೋಜಿಸಿದ್ದರು. ಅಷ್ಟೇ ಅಲ್ಲದೆ ಮೋಂಬತ್ತಿಗಳ ಪ್ರದರ್ಶನವನ್ನೂ ಯೋಜಿಸಿದ್ದರು. ಅಲ್ಲಿದ್ದ ಇನ್ನೂರು ಸಿ.ಎ. ಪ್ರತಿನಿಧಿಗಳಿಗೆ ಮೋಂಬತ್ತಿಗಳನ್ನು ರಿಟರ್ನ್ ಗಿಫ್ಟ್ ರೂಪದಲ್ಲಿ ಕೊಡಲೂ ನಿರ್ಧರಿಸಿದ್ದರು. ಭಾವೇಶ್ ಅವರ ಒಂದು ಗಂಟೆಯ ಭಾಷಣ ಎಲ್ಲರನ್ನೂ ಆಕರ್ಷಿಸಿತ್ತು. ಎಲ್ಲ ಸಿ.ಎ. ಮಿತ್ರರೂ ಭಾರೀ ಚಪ್ಪಾಳೆ ತಟ್ಟಿದ್ದರು. ಅದರ ನಂತರ ಕಾರ್ಯಾಗಾರದಲ್ಲಿ ಒಂದು ಸುಂದರ ಸೂರ್ಯಕಾಂತಿ ಹೂವಿನ ಮೋಂಬತ್ತಿಯನ್ನು ಮಾಡಿ ತೋರಿಸಿದರು. ಆ ಮೋಂಬತ್ತಿಯನ್ನು ಅವರ ಬಳಿ ನಿಂತಿದ್ದ ಸಿ.ಎ. ಅಸೋಸಿಯೇಷನ್‌ನ ಅಧ್ಯಕ್ಷರಿಗೆ ಉಡುಗೊರೆಯಾಗಿ ಕೊಡಲು ಬಯಸಿದರು. ಅವರೊಡನೆ ಅಭಯ್ ಅವರೂ ಇದ್ದರು.

ಅವರಿಬ್ಬರೂ ಪರಸ್ಪರ ಅದೇನು ನಿರ್ಧರಿಸಿದರೋ, ಭಾವೇಶ್ ತಯಾರಿಸಿದ ಸೂರ್ಯಕಾಂತಿಯ ಮೋಂಬತ್ತಿಯನ್ನು ಆ ಸಭೆಯಲ್ಲಿ ಹರಾಜು ಮಾಡಲು ಇಟ್ಟರು. ಆ ಮೋಂಬತ್ತಿಯ ಬೆಲೆ 110 ರೂಪಾಯಿ ಇದ್ದಿತು. ಆದರೆ ಅಭಯ್ ಅವರು ಅದಕ್ಕೆ ಏನಿಲ್ಲ ಎಂದರೂ 1000 ರೂಪಾಯಿಯ ಬೆಲೆ ಇಟ್ಟು ಸಿ.ಎ. ಮಿತ್ರರಿಗೆ ಅದರ ಮೇಲೆ ಕೂಗಲು ಹೇಳಿದರು. ಇದೆಲ್ಲ ಏನಾಗುತ್ತಿದೆ ಎಂದು ಭಾವೇಶ್ ಅವರಿಗೆ ಆರಂಭದಲ್ಲಿ ಅರ್ಥವೇ ಆಗಲಿಲ್ಲ. ನೋಡ ನೋಡುತ್ತಿದ್ದಂತೆಯೇ 110 ರೂಪಾಯಿಯ ಆ ಮೋಂಬತ್ತಿಯನ್ನು ಅಭಯ್ ಅವರ ಮಿತ್ರರಾದ ಪರ್ಮಾರ್ ಅವರು 21000 ರೂಪಾಯಿಗೆ ಕೂಗಿ, ಕೊಂಡುಕೊಂಡರು. ಆ 21,000 ರೂಪಾಯಿ ಜೊತೆಗೆ, ಮರು ಉಡುಗೊರೆಯಾಗಿ ಕೊಟ್ಟ ಮೋಂಬತ್ತಿಗಳು ಮತ್ತು ಪ್ರದರ್ಶನದಲ್ಲಿ ಇಟ್ಟ ಮೋಂಬತ್ತಿಗಳ ಮಾರಾಟ ಅಲ್ಲದೆ ಅಲ್ಲಿ ಸಿಕ್ಕ ಹೊಸ ಆರ್ಡರ್‌ಗಳನ್ನು ಕೂಡಿದಾಗ, ಆ ಒಂದು ಸಂಜೆ ಸುಮಾರು 5 ಲಕ್ಷ ಮೊತ್ತದ ಹಣದ ವ್ಯವಸ್ಥೆ ಆಗಿತ್ತು. ಇದೆಲ್ಲವೂ ಅಭಯ್ ಅವರ ಸಹೃದಯತೆಯ ಸಹಾಯದ ಪರಿಣಾಮವಾಗಿತ್ತು. ಹಾಸ್ಟೆಲ್ ಕಟ್ಟಡದ ಇಟ್ಟಿಗೆಯ ಮೇಲೆ ಇಟ್ಟಿಗೆ ಏರುತ್ತಾ ಹೋಗಲು ನೆರವಾಗಿತ್ತು.

2014ರ ಆ ವರ್ಷ ಬಹಳಷ್ಟು ಉತ್ಸಾಹದಿಂದ ಆರಂಭವಾಗಿತ್ತು. ಭಾವೇಶ್ ಮತ್ತು ನೀತಾರ ಮಹಾತ್ವಾಕಾಂಕ್ಷೆಯ ಪ್ರಾಜೆಕ್ಟ್ ಶುರುವಾದ ವರ್ಷವದು. ಆದರೆ ಹಣದ ಮುಗ್ಗಟ್ಟೊಂದೇ ಅವರೆದುರು ಇದ್ದ ಅಡಚಣೆಯಾಗಿರಲಿಲ್ಲ. ಮೇ 2014ರಲ್ಲಿ ಸುಹಾಸ್ ಅವರಿಂದ ಜಾಗ ಖರೀದಿ ಮಾಡಿ, ಹಾಸ್ಟೆಲ್ ನಿರ್ಮಿಸಲು ಆರಂಭಿಸಿದಾಗ, ಇಂತಹ ಒಳ್ಳೆಯ ಕೆಲಸಕ್ಕೂ ಅಡ್ಡ ಬಂದ ಕೆಲವು ಜನರಿದ್ದರು. ನಿರ್ಮಾಣವನ್ನು ತಡೆಯಲು ಕೂಡಾ ಅವರು ಪ್ರಯತ್ನಿಸಿದ್ದರು. ಅದೇ ಕಾರಣವಾಗಿ ಮಹಾಬಲೇಶ್ವರ್ ಪೊಲೀಸ್ ಠಾಣೆಗೆ ಹೋಗುವ ಸಂದರ್ಭ ಕೂಡಾ ಬಂದಿತ್ತು. ಅದೇ ರೀತಿ ಒಂದು ದಿನ ಪೊಲೀಸ್ ಠಾಣೆಯಲ್ಲಿ ಕುಳಿತಿದ್ದಾಗ, ನೀತಾಗೆ ಎರಡು ಮೂರು ಬಾರಿ ದಿಲ್ಲಿಯಿಂದ ಫೋನ್ ಬಂದಿತು. ಠಾಣೆಯ ಒಳಗಿದ್ದ ಕಾರಣ ನೀತಾ ಕರೆಯನ್ನು ಕತ್ತರಿಸಿದ್ದರು. ಪೋಲೀಸ್ ಠಾಣೆಯಿಂದ ಹೊರಗೆ ಬಂದಾಗ, ಮನಸ್ಸು ತುಂಬಾ ಭಾರವಾಗಿತ್ತು. ಕಾರಣ ಎಷ್ಟೇ ಒಳ್ಳೆಯ ಉದ್ದೇಶದಿಂದ ಕೆಲಸವನ್ನು ಮಾಡಿದರೂ, ಇಂತಹ ಸಂಕಟಗಳು, ಕಂಟಕಗಳು ಎದುರಾಗುತ್ತವೆ. ಪೊಲೀಸ್ ಸ್ಟೇಷನ್‌ಗೆ ಹೋಗಿ ಬರುವುದೇ ಕೆಲಸ ಆಗುತ್ತಿತ್ತು.

ಪೊಲೀಸ್ ಸ್ಟೇಷನ್‌ನಿಂದ ಹೊರಗೆ ಬಂದಾಗ, ನೀತಾ 'ಈ ದಿಲ್ಲಿಯವರಿಗೆ ಏನಾಗಿದೆಯೋ. ಬೆಳಿಗ್ಗೆಯಿಂದ ಮೂನಾಲ್ಕು ಬಾರಿ ಫೋನ್ ಮಾಡಿದ್ದಾರೆ. ಇವರಿಗೆ ನಮ್ಮ ನಂಬರ್ ಎಲ್ಲಿಂದ ಸಿಕ್ಕಿತು?' ಎಂದರು. ಆ ಸಮಯದಲ್ಲಿ ಅವರ ಜೊತೆ ಪೊಲೀಸು ಠಾಣೆಗೆ ಬಂದಿದ್ದ ಐದಾರು ಅಂಧ ಮಿತ್ರರೂ ಇದ್ದರು. ಅವರು ಮೋರೇಶ್ವರ್‌ಗೆ ಇನ್ನೇನು ಹೊರಡಬೇಕು, ಮತ್ತೆ ನೀತಾಗೆ ಫೋನ್ ಬಂದಿತು. ನೀತಾ, ಭಾವೇಶ್ ಅವರ ಕೈಗೆ ಫೋನ್ ಕೊಡುತ್ತಾ 'ಅದೇ ನಂಬರ್ ದಿಲ್ಲಿಯಿಂದ' ಎಂದರು. ಅದ್ಯಾರೋ ಇರಬೇಕು, ಮಾತಂತೂ ಆಡಿ ನೋಡೋಣ ಎಂದು ಫೋನ್ ಎತ್ತಿಕೊಂಡರು. ಅತ್ತ ಕಡೆಯಿಂದ 'ಮಿಸ್ಟರ್ ಭಾವೇಶ್ ಭಾಟಿಯಾ ಅವರೊಡನೆ ಮಾತನಾಡಬೇಕಿತ್ತು' ಎಂಬ ಸ್ವರ ಕೇಳಿಸಿತು.

ಭಾವೇಶ್ 'ಹೌದು, ನಾನೇ ಮಾತನಾಡುತ್ತಿದ್ದೇನೆ ಎಂದರು. ಅಲ್ಲಿಂದ ಮತ್ತೆ ಸ್ವರ ಕೇಳಿಸಿತು. 'ನಾವು ಬೆಳಗಿನಿಂದ ನಿಮ್ಮೊಡನೆ ಮಾತನಾಡಲು ಪ್ರಯತ್ನಿಸುತ್ತಾ ಇದ್ದೇವೆ. ನಾಲ್ಕೈದು ಬಾರಿ ನಮ್ಮ ಫೋನ್ ಕತ್ತರಿಸಲಾಯಿತು. ನಾನು ಸೋಷಿಯಲ್ ಜಸ್ಟೀಸ್ ಅಂಡ್ ಎಂಪವರ್ಮೆಂಟ್ ಮಿನಿಸ್ಟ್ರಿಯ ಕಾರ್ಯದರ್ಶಿ ಅವಸ್ಥೀ ಮಾತನಾಡುತ್ತಿದ್ದೇನೆ'. ಆ ಮಾತು ಕೇಳುತ್ತಿದ್ದಂತೆ, ಭಾವೇಶ್ ಅವರಿಗೆ ಅರೆ ನಮ್ಮಿಂದೇನಾದರೂ ಗೊತ್ತಿಲ್ಲದೆ ತಪ್ಪಾಗಿದೆಯೆ? ಎಂದು ಪ್ರಶ್ನೆ ಮೂಡಿತು. ವಿನಮ್ರವಾಗಿ 'ಹೇಳಿ ಸಾರ್, ಏನು ಹೇಳುವುದಿತ್ತು?' ಎಂದರು.

ಅವರು ಹೇಳಿದರು 'ಮಿಸ್ಟರ್ ಭಾಟಿಯಾ ಅವರೇ ಮಾತನಾಡುತ್ತಿರುವುದು ತಾನೆ?'

ಇವರು ಹೇಳಿದರು, 'ಹೌದು ಭಾವೇಶ್ ಭಾಟಿಯಾ ಮಾತನಾಡುತ್ತಿದ್ದೇನೆ'.

ಅವರು ಕೇಳಿದರು 'ನೀವು ಅಂಧರಾಗಿದ್ದು ಕ್ಯಾಂಡಲ್‌ನ ಬಿಸಿನೆಸ್ ಮಾಡುತ್ತಿರುವಿರಿ ಅಲ್ಲವೆ?'

ಭಾವೇಶ್ 'ಹೌದು ಸರ್' ಎಂದರು.

ಇವರ ಮಾತುಗಳನ್ನು ಕೇಳಿ ಅತ್ತ ಕಡೆಯಿಂದ ಸಮಾಧಾನದ ದೀರ್ಘ ಉಸಿರು ಎಳೆದ ಸದ್ದು. ನಂತರ ಅವರು ಹೇಳಿದರು:

'ಬೆಳಗ್ಗೆಯಿಂದ ನಿಮ್ಮನ್ನೇ ಹುಡುಕುತ್ತಿದ್ದೇವೆ. ನಿಮಗೆ ತಿಳಿಸಲು ಇಚ್ಛಿಸುತ್ತೇವೆ, ಅನೇಕ ಸಾವಿರ ನಾಮಿನೇಶನ್‌ನಲ್ಲಿ ನಮ್ಮ ಆಯ್ಕೆ ಸಮಿತಿ ನಿಮ್ಮ ಹೆಸರನ್ನು ಈ ಬಾರಿಯ ರಾಷ್ಟ್ರಪತಿ ಪುರಸ್ಕಾರಕ್ಕೆ ಆರಿಸಿದೆ. ನಿಮಗೆ ಬಹಳಷ್ಟು ಅಭಿನಂದನೆ ಹೇಳಲು ಇಷ್ಟ ಪಡುತ್ತೇವೆ. ನೀವು ಈ ವರ್ಷದ ಬೆಸ್ಟ್ ಬ್ಲೈಂಡ್ ಸೆಲ್ಫ್ ಎಂಪ್ಲಾಯ್ಮೆಂಟ್ ಕ್ಯಾಟಗರಿಯಲ್ಲಿ ರಾಷ್ಟ್ರೀಯ ಪುರಸ್ಕಾರವನ್ನು ರಾಷ್ಟ್ರಪತಿಯವರ ಹಸ್ತಗಳಿಂದ ಪಡೆಯಲಿದ್ದೀರಿ. ನೀವು ತಕ್ಷಣವೇ ನಮ್ಮ ಸೋಷಿಯಲ್ ಜಸ್ಟೀಸ್ ವಿಭಾಗದ ವೆಬ್‌ಸೈಟ್‌ಗೆ ಹೋಗಿ ಚೆಕ್ ಮಾಡಿ. ನಿಮಗೆ ಬಂದು ಹೋಗಲು ಟಿಕೆಟ್, ಇಲ್ಲಿ ಇರಲು ಪೂರ್ಣ ವ್ಯವಸ್ಥೆ ಇವೆಲ್ಲವುಗಳ ಬಗ್ಗೆ ತಿಳಿಯಲು ಸೈಟ್‌ನಲ್ಲಿ ಕೊಟ್ಟಿರುವ ದೂರವಾಣಿಯನ್ನು ಸಂಪರ್ಕಿಸಿ. ನಿಮಗೆ ಬೇಕಿರುವ ಎಲ್ಲ ವ್ಯವಸ್ಥೆಯನ್ನು